ಹೊಸ ಎಚ್ಚರವೊಂದನ್ನು ಗಳಿಸಿಕೊಂಡಿದ್ದಾರೆ. ಆ ವೈಚಾರಿಕ ಎಚ್ಚರ ಎಂಥದ್ದು ಎನ್ನುವುದಕ್ಕೆ ಮುಂದಿನ ಪ್ರಬಂಧ 'ಮೈಲುತುತ್ತದ ನೀಲಿ ಸ್ಫಟಿಕ'ದಲ್ಲಿ ಬರುವ ಈ ಕೆಳಗಿನ ಸಾಲುಗಳಲ್ಲಿ ಸುಳಿವಿದೆ.

'ಪದಾರ್ಥ ಮೀಮಾಂಸೆಗೂ ಧರ್ಮಕ್ಕೂ ಮತ್ತು ಮೋಕ್ಷಶಾಸ್ತ್ರಕ್ಕೂ ನಡುವೆ ಇರುವ ಈ ಸಾವಯವ ಸಂಬಂಧಗಳನ್ನು ನಾವು ಗ್ರಹಿಸದೆ ಉಳಿದರೆ, ಈ ದರ್ಶನಗಳೆಲ್ಲ ನಮಗೆ ಉಪದೇಶ ಮಾತ್ರವಾಗಿ ಕೇಳುತ್ತವೆ; ಭಾರತದ ದರ್ಶನಶಾಸ್ತ್ರವೇ ಐಹಿಕ-ಲೋಕ-ವಿಮುಖವೆಂಬ ಆಧುನಿಕ ಪೂರ್ವಗ್ರಹ ಇನ್ನೂ ಗಟ್ಟಿಯಾಗುತ್ತ ಹೋಗುತ್ತದೆ. ಆ ಕಾರಣಕ್ಕಾಗಿ ಆದರೂ ನಾವು ಹಳೆಗಾಲದ ಈ ದರ್ಶನಗಳ ಎದುರು ಹೊಸಗಾಲದ ಮೈಲುತುತ್ತವನ್ನು ಹೂಡಬೇಕು.'

'ಹಳೆಗಾಲದ ದರ್ಶನಗಳ ಎದುರು ಹೊಸಗಾಲದ ಮೈಲತುತ್ತವನ್ನು ಹೂಡುವುದು' ಇಲ್ಲಿನ ಎಲ್ಲ ಕೃತಿಗಳ ಹಿಂದಿರುವ ಸಾಮಾನ್ಯಸೂತ್ರ ಎಂದು ಹೇಳಬಹುದು.

ಈ 'ಹಳೆಗಾಲ'ವನ್ನು ಆರಾಧನೆಯ ನೋಟದಿಂದ ನೋಡುವುದು ಬೇರೆ. ಅಲ್ಲಿ 'ಹಳೆಗಾಲ'ವೆಂಬುದು 'ಸ್ಟ್ಯಾಚ್ಯೂ' ಆಗಿರುತ್ತದೆ. ಕಣ್ಣುಮುಚ್ಚಿಕೊಂಡು ನಡೆಸುವ ಆ ಆರಾಧನೆ ಅಂಧ ಅನುಕರಣೆಗೂ ಎಡೆಮಾಡಿಕೊಡುವ ಅಪಾಯ ಇರುತ್ತದೆ. 'ಹಳೆಗಾಲ'ವನ್ನು ಇಂದಿನ ನಮ್ಮ ಸ್ವಾರ್ಥಕ್ಕಾಗಿ, ಜನರಿಗೆ ಎರಚುವ ಮಂಕುಬೂದಿಯಾಗಿ ಬಳಸಿಕೊಳ್ಳುವ ಇನ್ನೊಂದು ಬಗೆಯೂ ಇದೆ. ಇಂದಿನ ಪಂಥಗಳ ಜಂಗಿಕುಸ್ತಿ ಮತ್ತದರ ಪ್ರಾಯೋಜಕಮೂಲಗಳನ್ನು ಅನುದಿನವೂ ನೋಡುತ್ತಿರುವ ನಮಗೆ ಹಾಗೆಂದರೇನು ಎಂದು ವಿವರಿಸುವ ಅಗತ್ಯವಿಲ್ಲ.

ಈ ಎರಡೂ ಅಲ್ಲದ ಮತ್ತೊಂದು ದಾರಿ ಅಕ್ಷರ ಅವರದ್ದು. ಇಂದು 'ಹಳೆಗಾಲ', 'ಹೊಸಗಾಲ' ಎಂದು ಎರಡಾಗಿ ಕಾಣುತ್ತಿರುವುದು ನಿಜವಾಗಿ ಎರಡಲ್ಲದೇ ಇರಬಹುದು. ಹಾಗಾಗಿ ಇಂದು ನಾವು ಎದುರಿಸುತ್ತಿರುವ ಎಷ್ಟೋ ಬಿಕ್ಕಟ್ಟುಗಳನ್ನು ನಮ್ಮ ಹಳೆಗಾಲದ ಹಿರೀಕರು ಎದುರಿಸಿರಬಹುದು. ಅವರು ಅದಕ್ಕೆ ಹೇಗೆ ಮುಖಾಮುಖಿಯಾಗಿದ್ದರು ಎಂಬ ಕುತೂಹಲದಿಂದ ಹೊರಟು, ಗತಕಾಲದ ಪರಿಕರಗಳನ್ನು ವರ್ತಮಾನಕ್ಕೆ ಹೊಂದುವ ಹಾಗೆ ಬಳಸಿಕೊಂಡು ಭವಿಷ್ಯವನ್ನು ಇನ್ನಷ್ಟು ಸಹ್ಯಗೊಳಿಸಿಕೊಳ್ಳಲು ಸಾಧ್ಯವೇ ಎಂಬ ಕುತೂಹಲದಿಂದ ಹೊರಟ ಪ್ರಯಾಣ ಇದು. ಇಲ್ಲಿ ಹಳೆಯದೆಲ್ಲವನ್ನೂ ಹೊನ್ನು ಎಂದು ಕಣ್ಣಿಗೊತ್ತಿಕೊಳ್ಳಬೇಕಾದ ಜರೂರು ಇಲ್ಲ. ಹಾಗೆಯೇ ಇಂದಿನ ವೈಜ್ಞಾನಿಕ ತರ್ಕದ ಹಲ್ಲಿಗೆ ಸಿಕ್ಕಿದ್ದು ಮಾತ್ರವೇ ಸತ್ಯ ಎಂಬ ಹಮ್ಮೂ ಇಲ್ಲ. ಮೂರ್ತಾಮೂರ್ತಗಳಲ್ಲಿ ಹರಡಿಕೊಂಡಿರುವ ದರ್ಶನಗಳನ್ನು ಅವುಗಳದ್ದೇ 'ಕಣ್ಣು ಧರಿಸಿ' ನೋಡುವುದು ಮತ್ತು ಅದನ್ನು ಇಂದಿನ ಕನ್ನಡಕದ ಫ್ರೇಮಿಗೆ ಕೂಡಿಸಲು ಸಾಧ್ಯವೇ ಎಂದು ಪ್ರಯತ್ನಿಸುವುದು ಇಲ್ಲಿನ ಎಲ್ಲ ಲೇಖನಗಳ ಹಿಂದಿರುವ ಸಾಮಾನ್ಯ ಸೂತ್ರ.

ಹಾಗಾಗಿಯೇ, ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ತೆಯ್ಯಮ್‌ನ ಆಚರಣೆಯನ್ನು ಕಂಡಷ್ಟೇ ಸಹಜವಾಗಿ, 'ಕೃತಕ ಬುದ್ಧಿಮತ್ತೆ' (ಎಐ) ಎಂಬ ಅತ್ಯಾಧುನಿಕ ವಿಜ್ಞಾನದ ಆವಿಷ್ಕಾರದ ಮಿತಿಗೂ ಮನುಷ್ಯನ ಪ್ರಜ್ಞೆಗೂ ಇರುವ ಮೂಲಭೂತ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಲೂ ಆ ಸೂತ್ರವೇ ಒದಗಿಬರುತ್ತದೆ. ಮೊದ ಮೊದಲಿನ ಬರಹಗಳಲ್ಲಿ ಪಾಶ್ಚಾತ್ಯ ಪ್ರಣೀತ ಶಿಕ್ಷಣ, ಕಲೆ, ವಿಜ್ಞಾನಗಳನ್ನು ಭಾರತೀಯ ದರ್ಶನಗಳಿಗೆ ಮುಖಾಮುಖಿಯಾಗಿಸಿ ಹೊಸ ಕಿಡಿ ಹೊತ್ತಿಸುವ ಪ್ರಯತ್ನ ಮುನ್ನಲೆಯಲ್ಲಿದ್ದರೆ, ನಂತರದ ಬರಹಗಳಲ್ಲಿ ಆ ದರ್ಶನದ ಹೊಳಹುಗಳನ್ನು ವರ್ತಮಾನದ ವ್ಯಾವಹಾರಿಕ ಜಗತ್ತಿನಲ್ಲಿ ಅನ್ವಯಿಸಿನೋಡುವ ಪ್ರಯತ್ನವಿದೆ. ಜಿ. ರಾಜಶೇಖರ ಮತ್ತು ಎಂ.ಎ. ಹೆಗಡೆಯವರ ವ್ಯಕ್ತಿಚಿತ್ರಗಳಲ್ಲಿಯೂ ಎರಡಂತೆ ಕಾಣುವ ಆದರೆ ಎರಡಲ್ಲದರ ಹುಡುಕಾಟ ಇರುವುದನ್ನು ಕಾಣಬಹುದು.

'ಕನ್ನಡ ಭಾಷೆಯ ಅತ್ಯಂತ ಪ್ರಮುಖವಾದ ಆಸ್ತಿಯು ಒಂದು ಸಹಸ್ರಮಾನಕ್ಕೂ ಮೀರಿದ ಅದರ ಗತಕಾಲದೊಳಗೆ ಅಡಕವಾಗಿದೆ' (ಅಭಿಮಾನ ಮತ್ತು ಆತಂಕಗಳ ಆಚೆಗೆ: ಕನ್ನಡ ನಾಡು-ನುಡಿಯ ಆಸ್ತಿ-ಜವಾಬ್ದಾರಿಗಳು) ಎನ್ನುವಾಗಲೂ ಅದೇ ಲೇಖನದಲ್ಲಿ ಮುಂದುವರಿದು 'ಕನ್ನಡ ಸಾಹಿತ್ಯದ ಆಧುನಿಕಪೂರ್ವ ಆಸ್ತಿಯೇನಾದರೂ ಉಳಿದುಕೊಂಡಿದ್ದರೆ, ಅದು ನಮ್ಮ ಯಾವ ಶಾಲೆಕಾಲೇಜುಗಳಲ್ಲೂ ಅಲ್ಲ; ತಾಳಮದ್ದಲೆ, ಗಮಕ, ಶ್ರೀಕೃಷ್ಣಪಾರಿಜಾತ, ತತ್ತ್ವಪದಕಾರರು ಮೊದಲಾದ ಸಾಮುದಾಯಿಕ ಪ್ರದರ್ಶನಗಳಲ್ಲಿ